2. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ ರವರ ಪತ್ರ ಎಲ್ ಎನ್ ಡಿ:ಸಿಆರ್: 123/2015–16/95054, ದಿನಾಂಕ: 08.10.2015 ಮತ್ತು 15.10.2015.
3. ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ: 22403/2015, (LB-RES) ರ ಆದೇಶ ದಿನಾಂಕ: 21.07.2015.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಶ್ರೀಮತಿ ಬೋಜಮ್ಮ ಎಂ.ಯು ರವರು ಪ್ರಸ್ತುತ ಹೊಂದಿರುವ ಕಾರ್ಕಡ ಗ್ರಾಮದ ಸ.ನಂ. 30/12/ ರಲ್ಲಿನ 0.29 ಎಕರೆ ಜಮೀನನ್ನು ಸರ್ಕಾರಕ್ಕೆ ಪಡೆದುಕೊಂಡು ಹಾಗೂ ಸರ್ಕಾರದ ವತಿಯಿಂದ ಈಗ ನೀಡಲಾಗುತ್ತಿರುವ ಗುಂಡ್ಮಿ ಗ್ರಾಮದ ಸರ್ವೆ ನಂ: 12/4ಎಪಿ1 ರಲ್ಲಿನ 0.29 ಎಕರೆ ಜಮೀನಿನ ಮೌಲ್ಯದ ವ್ಯತ್ಯಾಸ ₹. 5,84,628–00 ಗಳನ್ನು ಅವರಿಂದ ಪಾವತಿಸಿಕೊಂಡು, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಕೋಟ ವಿದ್ಯಾ ಸಂಘ (ರಿ) ಕೋಟ, ಉಡುಪಿ ಜಿಲ್ಲೆ ಇವರಿಗೆ ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ123 ಎಲ್‌ಜಿಎ 2005, ದಿನಾಂಕ: 17.01.2006ರಲ್ಲಿ ಮಂಜೂರು ಮಾಡಲು ಸರ್ಕಾರದ ಪೂರ್ವಾನುಮತಿ ನೀಡಿದ ಗುಂಡ್ಮಿ ಗ್ರಾಮದ ಸ.ನಂ.12/4ಎಪಿ1 ರಲ್ಲಿನ 4.00 ಎಕರೆ ಜಮೀನಿನ ಪೈಕಿ ಪಶ್ಚಿಮ ಭಾಗದಲ್ಲಿರುವ 0.29 ಎಕರೆ ಜಮೀನನ್ನು ಕಡಿಮೆ ಮಾಡಿ ಈ 0.29 ಎಕರೆ ಜಮೀನನ್ನು ಶ್ರೀಮತಿ ಬೋಜಮ್ಮ ಎಂ.ಯು ರವರಿಗೆ ಗ್ಯಾಸ್ ಗೋದಾಮು ನಿರ್ಮಿಸಲು ಮಂಜೂರು ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರಲ್ಲಿನ ಪತ್ರಗಳಲ್ಲಿ ಶ್ರೀಮತಿ ಬೋಜಮ್ಮ ಇವರು ದಿನಾಂಕ: 23.09.2015ರ ಆದೇಶದಂತೆ ವ್ಯತ್ಯಾಸದ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಒಪ್ಪಿಗೆ ಇರುವುದಿಲ್ಲ. ಉಚಿತವಾಗಿ ಜಮೀನನ್ನು ಪಡೆಯುವ ಇಚ್ಛೆಯಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 24.08.2015ರ ಆದೇಶದನ್ವಯ ಬದಲಿ ಸರ್ಕಾರಿ ಜಮೀನನ್ನು ಮಂಜೂರು ಮಾಡಿ ಆ ಜಮೀನಿನಲ್ಲಿ ಅನಿಲ ದಾಸ್ತಾನು ಗೋದಾಮು ನಿರ್ಮಾಣಗೊಂಡು ಅನಿಲ ಸರಬರಾಜು ಪ್ರಾರಂಭಗೊಂಡ ನಂತರ, ಮಾನ್ಯ ಉಚ್ಚ ನ್ಯಾಯಾಲಯವು ನನ್ನ ಸ್ವಂತ ಜಮೀನನ್ನು ಸರ್ಕಾರದ ವಶಕ್ಕೆ ನೀಡಲು ಆದೇಶ ನೀಡಿದಲ್ಲಿ ಆ ಆದೇಶಕ್ಕೆ ಬದ್ಧಳಾಗಿರುವುದಾಗಿ ಲಿಖಿತ ಅಭಿಪ್ರಾಯವನ್ನು ಸಲ್ಲಿಸಿರುವುದಾಗಿ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ರವರು ವರದಿ ಮಾಡಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ: 22403/2015 (LB-RES) ಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ಶ್ರೀಮತಿ ಬೋಜಮ್ಮ ರವರಿಗೆ ಬದಲಿ ಜಮೀನನ್ನು ಉಚಿತವಾಗಿ ನೀಡುವುದಾಗಿ ನ್ಯಾಯಾಲಯಕ್ಕೆ ಭರವಸೆ ನೀಡಿರುವುದರಿಂದ ಈಗಾಗಲೇ ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 91 ಎಲ್‌ಜಿಎ 2015, ದಿನಾಂಕ: 23.09.2015ನ್ನು ಮಾರ್ಪಡಿಸಲು ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ 91 ಎಲ್‌ಜಿಎ 2015, ದಿನಾಂಕ: 16.10.2015.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 91 ಎಲ್ ಜಿಎ 2015, ದಿನಾಂಕ: 23.09.2015ರ ಆದೇಶದ ಆದೇಶ ಭಾಗವನ್ನು ಈ ಕೆಳಕಂಡಂತೆ ಮಾರ್ಪಡಿಸಲಾಗಿದೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಬೋಜಮ್ಮ ಎಂ.ಯು ಬಿನ್ ಚಿನ್ನಪ್ಪ ರವರು ಪ್ರಸ್ತುತ ಹೊಂದಿರುವ ಕಾರ್ಕಡ ಗ್ರಾಮದ ಸ.ನಂ. 30/12 ರಲ್ಲಿನ 0.29 ಎಕರೆ ಜಮೀನನ್ನು ಸರ್ಕಾರಕ್ಕೆ ಪಡೆದುಕೊಂಡು ಇದರ ಬದಲಿಗೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಕೋಟ ವಿದ್ಯಾ ಸಂಘ (ರಿ) ಕೋಟ, ಉಡುಪಿ ಜಿಲ್ಲೆ ಇವರಿಗೆ ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 123 ಎಲ್‌ಜಿಎ 2005 ದಿನಾಂಕ: 17.01.2006 ರಲ್ಲಿ ಮಂಜೂರು ಮಾಡಲು ಸರ್ಕಾರದ ಪೂರ್ವಾನುಮತಿ ನೀಡಿದ ಗುಂಡ್ಮಿ ಗ್ರಾಮದ ಸ.ನಂ. 12/4ಎಪಿ1 ರಲ್ಲಿನ 4.00 ಎಕರೆ ಜಮೀನಿನ ಪೈಕಿ ಪಶ್ಚಿಮ

ಭಾಗದಲ್ಲಿರುವ 0.29 ಎಕರೆ ಜಮೀನನ್ನು ಕಡಿಮೆ ಮಾಡಿ ಈ 0.29 ಎಕರೆ ಜಮೀನನ್ನು ಯಾವುದೇ ದರವನ್ನು ವಿಧಿಸದೆ ಶ್ರೀಮತಿ ಬೋಜಮ್ಮ ಎಂ.ಯು ಬಿನ್ ಚಿನ್ನಪ್ಪ ರವರಿಗೆ ಗ್ಯಾಸ್ ಗೋದಾಮು ನಿರ್ಮಿಸಲು ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಉದಯ ಆರ್.ನಾಯಕ್,

PR. 667 **ಪೀಠಾಧಿಕಾರಿ,**

SC.25 ಕಂದಾಯ ಇಲಾಖೆ. (ಭೂ.ಮಂ.–2)

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಪಸಂಮೀ 213 ಮೀಇಯೋ 2014, ಬೆಂಗಳೂರು, ದಿನಾಂಕ: 16.10.2015.

ಸಂಖ್ಯೆ: ಪಸಂಮೀ/142/ಮೀಇಯೋ/2014, ದಿನಾಂಕ: 10.09.2014ರ ಆದೇಶ ಭಾಗದ ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂಖ್ಯೆ: 6ರಲ್ಲಿ ಮೊದಲನೇ ಸಾಲಿನಲ್ಲಿರುವ "6 ತಿಂಗಳೊಳಗಾಗಿ" ಎಂಬುದರ ಬದಲಾಗಿ "ಒಂದು ವರ್ಷದೊಳಗೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ರಶ್ಮಿ ಶಿವಶಂಕರ ಪೋಳ

PR. 648 ಸರ್ಕಾರದ ಅಧೀನ ಕಾರ್ಯದರ್ಶಿ

SC.50 ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀನುಗಾರಿಕೆ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವಾಲಯ

ವಿಷಯ: 2011ರ ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮದ ಉಪಬಂಧಗಳಲ್ಲಿ ನಿಗಧಿಪಡಿಸಿರುವ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:

1. ದಿನಾಂಕ: 06.04.2011ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2011.
2. ಸರ್ಕಾರದ ದಿನಾಂಕ: 27/08/2012ರ ಆದೇಶ ಸಂಖ್ಯೆ: ಇಡಿ 48 ಟಿವಿಇ 2012.
3. ಸರ್ಕಾರದ ದಿನಾಂಕ: 08/10/2013ರ ಆದೇಶ ಸಂಖ್ಯೆ: ಇಡಿ 161 ಟಿವಿಇ 2013.
4. ಸರ್ಕಾರದ ದಿನಾಂಕ: 25/06/2014ರ ಆದೇಶ ಸಂಖ್ಯೆ: ಇಡಿ 161 ಟಿವಿಇ 2013.
5. ಸರ್ಕಾರದ ದಿನಾಂಕ: 12/05/2015ರ ಆದೇಶ ಸಂಖ್ಯೆ: ಇಡಿ 48 ಟಿವಿಇ 2015.
6. ನಿರ್ದೇಶಕರು, ವೃತ್ತಿ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಇವರ ಪತ್ರ ಸಂಖ್ಯೆ: ವೃಶಿನಿ/ವಿಲೀನ. ಪ್ರಕ್ರಿಯೆ/ಅ.ವಿ.ಬ/2015, ದಿನಾಂಕ: 08/09/2015.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಪದವಿಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವುದಕ್ಕೆ ಸಂಬಂಧಿಸಿದಂತೆ, ಉಪಬಂಧ ಕಲ್ಪಿಸಿ ಅಧಿನಿಯಮ ಹೊರಡಿಸಲಾಗಿದೆ. ಸದರಿ ಅಧಿನಿಯಮದ 4ನೇ ಪ್ರಕರಣದ (4)ನೇ ಉಪ ಪ್ರಕಣದಲ್ಲಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಒಳಗೆ ಪ್ರಕ್ರಿಯೆ ಪೂರ್ಣಗೊಳಿಸಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ಅಧಿನಿಯಮದ ಅವಧಿಯು ದಿನಾಂಕ: 05.04.2012ಕ್ಕೆ ಅಂತ್ಯಗೊಂಡಿರುತ್ತದೆ.

ಪ್ರಸ್ತುತ ಸರ್ಕಾರಿ ಸಂಸ್ಥೆ/ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ವಿವಿಧ ಇಲಾಖೆಗಳಿಗೆ ನಿಯೋಜಿಸುವ ಸಂಬಂಧವಾಗಿ ದಿನಾಂಕ:04.03.2012 ಹಾಗೂ 05.03.2012 ರಂದು ಕೌನ್ಸೆಲಿಂಗ್ ನಡೆಸಲಾಗಿರುತ್ತದೆ. ಆದರೆ ಖಾಸಗಿ ವಿಲೀನ ಪ್ರಕ್ರಿಯೆ ಸಮಿತಿಯ ಅಧ್ಯಕ್ಷರು ಸಲ್ಲಿಸಿರುವ ವರದಿಯಲ್ಲಿ ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅರೆಕಾಲಿಕ ಸಿಬ್ಬಂದಿಗಳನ್ನು ಅಧಿನಿಯಮದಂತೆ ವಿವಿಧ ಖಾಸಗಿ ಅನುದಾನಿತ ಸಂಸ್ಥೆಗೆ ನಿಯೋಜಿಸಲು ಹುದ್ದೆಗಳ ಕೊರತೆ ಉಂಟಾಗಿರುವುದರಿಂದ ಸದರಿ ಸಿಬ್ಬಂದಿಗಳನ್ನು ನಿಯೋಜಿಸಲು ವಿಳಂಬವಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ: 06.04.2011ರ ಅಧಿಸೂಚನೆಯಲ್ಲಿ ಸೂಚಿಸಿರುವ ಕಾಲಮಿತಿಯನ್ನು ಮೇಲೆ (2)ರಿಂದ (5)ರಲ್ಲಿ ಓದಲಾದ ಆದೇಶಗಳಲ್ಲಿ ವಿಲೀನ ಪ್ರಕ್ರಿಯೆಯ ಕಾಲಾವಧಿಯನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ (6)ರಲ್ಲಿ ಓದಲಾದ ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿನಾಂಕ: 06/09/2015ರ ಪತ್ರದಲ್ಲಿ 1447 ಸಿಬ್ಬಂದಿಗಳ ವಿಲೀನ ಪ್ರಕ್ರಿಯೆಯು ಭಾಗಶ: ಪೂರ್ಣಗೊಂಡಿದ್ದು ಬಾಕಿ ಉಳಿದಿರುವ ಅಂದಾಜು 221 ಸಿಬ್ಬಂದಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಲಭ್ಯವಾಗಿರುವ ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಲ್ಲಿ ವಿಲೀನಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಬೇಕಾಗಿರುವುದರಿಂದ ಸೆಪ್ಟಂಬರ್ 31ಕ್ಕೆ ಅಂತ್ಯಗೊಳ್ಳುತ್ತಿರುವ ವಿಧೇಯಕದ ಕಾರ್ಯನುಷ್ಠಾನ ಅವಧಿಯನ್ನು 06 ತಿಂಗಳು ವಿಸ್ತರಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 117 ಟಿವಿಇ 2015, ಬೆಂಗಳೂರು, ದಿನಾಂಕ: 15.10.2015.

2011ರ ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮದ 4ನೇ ಪ್ರಕರಣದ 4ನೇ ಉಪ ಪ್ರಕರಣದ ಪ್ರಕಾರ ಬಾಕಿ ಉಳಿದಿರುವ 221 ಜೆ.ಓ.ಸಿ ಸಿಬ್ಬಂದಿಯನ್ನು ವಿಲೀನಗೊಳಿಸುವ ಪ್ರಕ್ರಿಯೆ ಪೂರ್ಣಗೊಳಿಸಬೇಕಾಗಿರುವುದರಿಂದ, ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ದಿನಾಂಕ: 01.10.2015 ರಿಂದ 31.03.2015ರವರೆಗೆ ಕಾಲಾವಧಿಯನ್ನು ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ತಾರಾ,
ಸರ್ಕಾರದ ಅಧೀನ ಕಾರ್ಯದರ್ಶಿ,(ಸಾಮಾನ್ಯ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

PR. 646
SC.100

ಒಳಾಡಳಿತ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಹೆಚ್‌ಡಿ 16 ಪಿಸಿಇ 2013(ಭಾ–1) ಬೆಂಗಳೂರು, ದಿನಾಂಕ: 30.09.2015.

ದಿನಾಂಕ: 02/03/2012ರಂದು ಬೆಂಗಳೂರು ನಗರದ ಸಿಟಿ ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ಪೊಲೀಸರು, ವಕೀಲರು ಮತ್ತು ಮಾಧ್ಯಮದವರುಗಳ ನಡುವೆ ನಡೆದ ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ ಮಂಡಿಸಿದ ವಕೀಲರುಗಳಿಗೆ ಸಂಭಾವನೆ ನೀಡಲು ಮಂಜೂರಾತಿ ನೀಡಿರುವ ಆದೇಶ ಸಂಖ್ಯೆ ಹೆಚ್‌ಡಿ 16 ಪಿಸಿಇ 2013 (ಭಾಗ–1), ದಿನಾಂಕ: 10/09/2015ರ ಆದೇಶ ಭಾಗದಲ್ಲಿ **"ಹಣ ಹಿಂಪಡೆಯುವ ಮತ್ತು ವಿತರಿಸುವ ಅಧಿಕಾರಿಯನ್ನಾಗಿ ಜಂಟಿ ನಿರ್ದೇಶಕರು (ಹಣಕಾಸು), ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ"** ಎಂಬುದಕ್ಕೆ ಬದಲಾಗಿ **"ಹಣ ಹಿಂಪಡೆಯುವ ಮತ್ತು ವಿತರಿಸುವ ಅಧಿಕಾರಿಯನ್ನಾಗಿ ಪ್ರಧಾನ ಆಡಳಿತಾಧಿಕಾರಿಗಳು, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ"** ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ.ಎಸ್. ಜೋಗೋಜಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ. (ಕಾನೂನು ಮತ್ತು ಸುವ್ಯವಸ್ಥೆ)

PR. 622
SC.50

ವಸತಿ ಸಚಿವಾಲಯ

ವಿಷಯ: ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ನಿರ್ದೇಶಕರ/ಸದಸ್ಯರ ಹೆಸರುಗಳಿಗೆ ಷೇರುಗಳ ಬದಲಾವಣೆ ಕುರಿತು.

ಓದಲಾಗಿದೆ: ಪತ್ರ ಸಂಖ್ಯೆ: ಎಂಡಿ ಆರ್‌ಜಿಆರ್‌ಹೆಚ್‌ಸಿಎಲ್ 08 ಬಿಡಿಎಂ 22 2002, ದಿನಾಂಕ: 03.09.2015.

ಪ್ರಸ್ತಾವನೆ:

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಒಂದು ಸಾರ್ವಜನಿಕ ನಿಯಮಿತ ಸಂಸ್ಥೆಯಾಗಿದೆ. ತಲಾ 100 **₹.** ಗಳ ಒಟ್ಟು 3 ಲಕ್ಷ ಶೇರುಗಳ ಸಂದಾಯಿತ ಬಂಡವಾಳ ಹೊಂದಿರುತ್ತದೆ. ಇದರಲ್ಲಿ 2,99,993 ಶೇರುಗಳು ಘನವೆತ್ತ ರಾಜ್ಯಪಾಲರು ಹೊಂದಿದ್ದು, ಉಳಿದ 7 ಶೇರುಗಳು ಕರ್ನಾಟಕ ಸರ್ಕಾರದ ವತಿಯಿಂದ 7 ಅಧಿಕಾರಿಗಳ ಹೆಸರಿನಲ್ಲಿರುತ್ತದೆ. ಕೆಲವು ಅಧಿಕಾರಿಗಳು ವರ್ಗಾವಣೆಗೊಂಡಿರುವುದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನಿರ್ದೇಶಕರುಗಳ ಹೆಸರಿಗೆ ಷೇರುಗಳನ್ನು ಬದಲಾವಣೆ ಮಾಡಿ ಆದೇಶ ಹೊರಡಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 312 ಹೆಚ್ ಎಎಂ 2015, ಬೆಂಗಳೂರು, ದಿನಾಂಕ: 18ನೇ ಸೆಪ್ಟೆಂಬರ್, 2015.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಸಂಸ್ಥಾ ನಿವೇದನಾ ಪತ್ರದ ಅನುಚ್ಛೇದ 63ರಿಂದ 69ರಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಈ ಕೆಳಕಾಣಿಸಿದಂತೆ ತಲಾ **₹.** 100ರ ಮುಖಬೆಲೆಯ ಷೇರುಗಳನ್ನು ಈ ಕೆಳಕಂಡ ಅಧಿಕಾರಿಗಳ ಹೆಸರಿಗೆ ವರ್ಗಾಯಿಸಲು ಸರ್ಕಾರದ ಅನುಮತಿ ನೀಡಲಾಗಿದೆ.

ಕ್ರಮ ಸಂಖ್ಯೆ:	ಷೇರು ಹೊಂದಿರುವ ಅಧಿಕಾರಿಗಳ ಹೆಸರು	ಷೇರುಗಳನ್ನು ವರ್ಗಾಯಿಸಲ್ಪಡಬೇಕಾಗಿರುವ ಅಧಿಕಾರಿಗಳ ಹೆಸರು
1	ಶ್ರೀ ಸಂಜೀವ್ ಕುಮಾರ್ ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ ವಸತಿ ಇಲಾಖೆ.	ಶ್ರೀ ಶಂಭು ದಯಾಳ್ ಮೀನಾ ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ ವಸತಿ ಇಲಾಖೆ
2	ಡಾ॥ ಜೆ. ರವಿಶಂಕರ್, ಭಾ.ಆ.ಸೇ., ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಬೆಂಗಳೂರು.	ಶ್ರೀ ವಿ. ಯಶವಂತ್ ಭಾ.ಆ.ಸೇ., ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಬೆಂಗಳೂರು.

3	ಶ್ರೀ ಎಸ್.ಆರ್. ಉಮಾಶಂಕರ್ ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಶ್ರೀ ರಿತೇಶ್ ಕುಮಾರ್ ಸಿಂಗ್ ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ
4	ಶ್ರೀ ಎಸ್.ಎನ್. ಜಯರಾಮ್ ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ.	ಶ್ರೀಮತಿ ಎಂ.ವಿ. ಸಾವಿತ್ರಿ ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ
5	ಶ್ರೀ ರಮೇಶ್ ಕೆ. ಜಾಗಿರ್ ದಾರ್ ಸರ್ಕಾರದ ಜಂಟಿ ಕಾರ್ಯದರ್ಶಿ, ವಸತಿ ಇಲಾಖೆ	ಶ್ರೀ ಪ್ರಕಾಶ್ ರಾವ್ ಕೇಸರ್ಕರ್ ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಮೀರ್ ಮಡಿಮನ್,
ಸರ್ಕಾರದ ಅಧೀನ ಕಾರ್ಯದರ್ಶಿ–2,
ವಸತಿ ಇಲಾಖೆ.

PR. 623

PLANNING PROGRAMME MONITORING AND STATISTICS SECRETARIAT

Sub: Constitution of Committee for Rationalisation of State Plan Schemes-reg.

PREAMBLE:

The Government of Karnataka is currently implementing developmental programmes through 37 administrative departments. These programmes are carried out through State and Central plan schemes.

With a view to improving the effectiveness of developmental programmes, the Government of Karnataka had initiated a process of rationalization of State Plan Schemes during the year 2014-15.

In order to bring in greater efficiency and focus in the targeting of programmes, and in order to channel the energies and efforts of government departments more effectively, it is proposed to conduct a detailed exercise of rationalization before finalization of the State Budget for the year 2016-17, so that schemes which are not relevant can be discontinued and schemes with similar objectives can be merged. It is proposed to constitute a Two-Member Committee for this task.

Hence this order.

GOVERNMENT ORDER NO: PD 93 PSD 2015, BENGALURU, DATED: 05-11-2015.

In the circumstances explained in the preamble, the Government of Karnataka is pleased to accord approval for the constitution of a **Committee for Rationalisation of State Plan Schemes** with the following members.

1. S.V. Ranganath, former Chief Secretary, Government of Karnataka
2. Anita Kaul, former Additional Chief Secretary, Planning Department, Government of Karnataka & former Secretary, Department of Justice, Govt. of India.

Terms of Reference (TOR) of the Committee will be as follows:

1. To examine and suggest rationalization of State plan schemes.
2. Suggest the appropriate size/scope of developmental schemes.
3. Suggest the mechanism of monitoring of State flagship schemes.
4. Suggest Evaluation cycle of the plan schemes.

The Committee may invite any other official/expert as a special invitee to any of its meetings.

The Committee shall submit its report within 2 months from the date of Government Order.

The expenditure involved shall be debited to the head of account ``3451-00-090-2-26 (studies)"

Director, PMI, Planning Department will provide necessary information and background materials to the Committee and will also arrange the meetings with the administrative departments for collection of necessary information.

By order and in the name of the Governor of Karnataka,
RAFFI AHAMED M.S.
Under Secretary to Government (1 &2),
Planning, Programme Monitoring & Statistics Department.

PR. 675

ಸಹಕಾರ ಸಚಿವಾಲಯ

ವಿಷಯ: 2015–16ನೇ ಸಾಲಿಗೆ ಬೆಳೆಸಾಲದ ಮಾದರಿಯಲ್ಲಿ, ಸಹಕಾರಿ ಬ್ಯಾಂಕುಗಳಿಂದ ಶೂನ್ಯ ಬಡ್ಡಿ ದರದಲ್ಲಿ ರೂ.50,000–00 ದವರೆಗೆ ಪಶು ಆಹಾರ/ಇತರೆ ನಿರ್ವಹಣೆ ವೆಚ್ಚಕ್ಕಾಗಿ ಅಲ್ಪಾವಧಿ ಸಾಲ ಒದಗಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ.

ಓದಲಾಗಿದೆ:

1. ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಪಸಂಮೀ/ಕಾ/127/2015, ದಿನಾಂಕ:09.04.2015.
2. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ/62/ಪಪಾಯೋ/2015 (ಭಾಗ), ದಿನಾಂಕ:15.05.2015.
3. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಅನಿ/ಡಿಎವೈ–1/ 22/ಬಜೆಟ್/2015–16, ದಿನಾಂಕ:15.05.2015.

ಪ್ರಸ್ತಾವನೆ:

2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಬೆಳೆಸಾಲದ ಮಾದರಿಯಲ್ಲಿ, ಸಹಕಾರಿ ಬ್ಯಾಂಕುಗಳಿಂದ ಶೂನ್ಯ ಬಡ್ಡಿ ದರದಲ್ಲಿ ರೂ.50,000–00 ದವರೆಗೆ ಪಶು ಆಹಾರ / ಇತರೆ ನಿರ್ವಹಣೆ ವೆಚ್ಚಕ್ಕಾಗಿ ಅಲ್ಪಾವಧಿ ಸಾಲ ಒದಗಿಸಲಾಗುವುದೆಂದು ಘೋಷಿಸಲಾಗಿರುತ್ತದೆ.

ಮೇಲೆ (1)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಇವರು ಪಶುಸಂಗೋಪನೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಜಾನುವಾರುಗಳ ಪಶು ಆಹಾರ ಅಥವಾ ಇತರೆ ನಿರ್ವಹಣೆ ಕುರಿತ ಘಟಕ ವೆಚ್ಚದ ಷರತ್ತಿಗೊಳಪಟ್ಟು ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯು "ಪಶುಭಾಗ್ಯ" ಯೋಜನೆಯಡಿ ಪಶುಸಂಗೋಪನಾ ವಲಯಕ್ಕೆ ಸಾಲ ಸೌಲಭ್ಯ ಒದಗಿಸುವ ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿವಿಧ ಜಾನುವಾರುಗಳ ಘಟಕ ಸ್ಥಾಪಿಸಲು ಘಟಕ ವೆಚ್ಚ ಪರಿಷ್ಕರಣೆ/ನಿಗಧಿಪಡಿಸಿ ಆದೇಶ ಹೊರಡಿಸಿರುತ್ತದೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಶೂನ್ಯ ಬಡ್ಡಿ ದರದಲ್ಲಿ ಸಾಲ ವಿತರಿಸುವ ಕುರಿತಂತೆ ಕರಡು ರೂಪುರೇಷೆಗಳನ್ನು ಸಿದ್ಧಪಡಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಒ 146 ಸಿಎಲ್ಎಸ್ 2015, ಬೆಂಗಳೂರು, ದಿನಾಂಕ:29.09.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳೆಸಾಲದ ಮಾದರಿಯಲ್ಲಿ, ಪಶು ಆಹಾರ/ಇತರೆ ನಿರ್ವಹಣೆ ವೆಚ್ಚಕ್ಕಾಗಿ ಸಹಕಾರಿ ಬ್ಯಾಂಕುಗಳಿಂದ ಶೂನ್ಯ ಬಡ್ಡಿ ದರದಲ್ಲಿ ರೂ.50,000/– ವರೆಗೆ ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 62 ಪಪಾಯೋ 2015 (ಭಾಗ), ದಿನಾಂಕ:15.05.2015 ರ ಅನುಬಂಧ–2ರಲ್ಲಿ ನೀಡಿರುವ ವಿವಿಧ ಜಾನುವಾರುಗಳ ಘಟಕಗಳ ವೆಚ್ಚದನ್ವಯ, ವಿವಿಧ ಪಶುಸಂಗೋಪನೆ ಚಟುವಟಿಕೆಗಳಾದ ಹೈನುಗಾರಿಕೆ ಘಟಕ (Dairy Units), ಕುರಿ/ಮೇಕೆ ಘಟಕ (Sheep/Goat Units), ಹಂದಿ ಘಟಕ (Piggery Units), ಕೋಳಿ ಘಟಕ (Poultry Units) ಗಳಿಗೆ ಆಯವ್ಯಯ "ಲೆಕ್ಕ ಶೀರ್ಷಿಕೆ 2425–00–107–2–41" ರಲ್ಲಿ ಒದಗಿಸಲಾಗಿರುವ ರೂ.1,560.00 ಲಕ್ಷಗಳ ಯೋಜನೆಯನ್ನು ಅನುಬಂಧದಲ್ಲಿ ನೀಡಲಾಗಿರುವ ಷರತ್ತು/ಮಾನದಂಡಗಳನ್ವಯ ಜಾರಿಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ/51/ಎಫ್ಆರ್ಒ/2015, ದಿನಾಂಕ:18.06.2015 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಎಫ್‌ಡಿ 218 ಇಎಕ್ಸ್‌ಪಿ–2/ 2015, ದಿನಾಂಕ:02.07.2015 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

ಅನುಬಂಧ

(ಆದೇಶ ಸಂ:ಸಿಒ 146 ಸಿಎಲ್ಎಸ್ 2015, ದಿ:29.09.2015)

1. ಈ ಯೋಜನೆಯು ದಿನಾಂಕ: 01.04.2015 ರಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಸಹಕಾರ ಬ್ಯಾಂಕುಗಳು (ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು) ಪಶು ಆಹಾರ / ಇತರೆ ನಿರ್ವಹಣೆ ವೆಚ್ಚಗಳಾದ:–
    1. ಹೈನುಗಾರಿಕೆ ಘಟಕ (Dairy Units),
    2. ಕುರಿ / ಮೇಕೆ ಘಟಕ (Sheep / Goat Units),
    3. ಹಂದಿ ಘಟಕ (Piggery Units),
    4. ಕೋಳಿ ಘಟಕ (Poultry Units)

    ಗಳಿಗೆ ನೀಡುವ ಅಲ್ಪಾವಧಿ ಸಾಲಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಈ ಯೋಜನೆಯಡಿ ಶೂನ್ಯ ಬಡ್ಡಿದರ ರೂ.50,000/– ವರೆಗಿನ ಸಾಲಗಳಿಗೆ ಮಾತ್ರ ಅನ್ವಯಿಸುತ್ತದೆ.
3. ರೂ.50,000/– ಗಳಿಗಿಂತ ಹೆಚ್ಚಿನ ಸಾಲಗಳ ಸಂಪೂರ್ಣ ಮೊತ್ತಕ್ಕೆ ಸಾಮಾನ್ಯ ಬಡ್ಡಿ ದರ ಅನ್ವಯವಾಗುತ್ತದೆ.
4. ಈ ಯೋಜನೆಯಡಿ ಪ್ರಾಥಮಿಕ ಹಂತದಲ್ಲಿ ಪತ್ತಿನ ಸಹಕಾರ ಸಂಘಗಳು / ಸಹಕಾರ ಬ್ಯಾಂಕುಗಳು ಒದಗಿಸುವ ಸಾಲಗಳ ಮೇಲೆ ಗೊತ್ತುಪಡಿಸಿದ ದರದಲ್ಲಿ ಸರ್ಕಾರವು ಬಡ್ಡಿ ಸಹಾಯಧನವನ್ನು ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ (ಡಿ.ಸಿ.ಸಿ.) ಬ್ಯಾಂಕುಗಳಿಗೆ ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಕಸ್ಕಾರ್ಡ್) ಬ್ಯಾಂಕಿಗೆ ಒದಗಿಸುತ್ತದೆ.
5. ರೂ.50,000/– ದವರೆಗಿನ ಸಾಲಗಳನ್ನು ವಿತರಿಸಲು ಡಿ.ಸಿ.ಸಿ ಬ್ಯಾಂಕುಗಳು, ಸಹಕಾರ ಸಂಘಗಳಿಗೆ ತಾನು ನಿಗದಿಪಡಿಸುವ ಅಥವಾ ನಬಾರ್ಡ್ ಸಂಸ್ಥೆಯಿಂದ ನೀಡುವ ಯುಕ್ತ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸತಕ್ಕದ್ದು ಮತ್ತು ಸಹಕಾರ ಸಂಘಗಳು ಮೇಲಿನ ಚಟುವಟಿಕೆಗಳಿಗೆ ಶೂನ್ಯ ಬಡ್ಡಿದರದಲ್ಲಿ ಸಾಲಗಳನ್ನು ಒದಗಿಸತಕ್ಕದ್ದು.
6. ಕಸ್ಕಾರ್ಡ್ ಬ್ಯಾಂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಗೆ ತಾನು ನಿಗದಿಪಡಿಸುವ ಯುಕ್ತ ಬಡ್ಡಿ ದರದಲ್ಲಿ ಈ ಯೋಜನೆಯ ಫಲಾನುಭವಿಗಳಿಗೆ ಸಾಲಗಳನ್ನು ಒದಗಿಸತಕ್ಕದ್ದು ಮತ್ತು ಪಿಕಾರ್ಡ್ ಬ್ಯಾಂಕುಗಳು ಶೂನ್ಯ ಬಡ್ಡಿ ದರದಲ್ಲಿ ಸಾಲಗಳನ್ನು ಈ ಯೋಜನೆಯ ಫಲಾನುಭವಿಗಳಿಗೆ ಒದಗಿಸತಕ್ಕದ್ದು.

7. ಪಶುಸಂಗೋಪನೆ ಇಲಾಖೆಯು ಈ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ನೀಡಿ, ಈ ಯೋಜನೆಯಡಿ ಬರುವ ವಿವಿಧ ಘಟಕಗಳಿಗೆ ಹೆಚ್ಚು ಸಾಲ ಒದಗಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
8. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕುಗಳು, ಕೃಷಿ ಪತ್ತಿನ ಸಹಕಾರ ಸಂಘಗಳು, ಕಸ್ಕಾರ್ಡ್ ಬ್ಯಾಂಕು, ಪಿಕಾರ್ಡ್ ಬ್ಯಾಂಕುಗಳು ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ರೂ.50,000/– ಗಳ ಮಿತಿಗೊಳಪಟ್ಟು ಒದಗಿಸಲು ಅಗತ್ಯವಾದ ಕ್ರಮವನ್ನು ಕೈಗೊಳ್ಳತಕ್ಕದ್ದು.
9. ಈ ಯೋಜನೆಯಡಿ ವಿತರಿಸಲಾದ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರದ ಬದ್ಧತೆಯು ರೂ.50,000/– ದವರೆಗೆ ಹಾಗೂ ಸಾಲದ ಅವಧಿಗೆ ಅಥವಾ ಗರಿಷ್ಠ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.
10. ನಿಗದಿತ ಅವಧಿಯೊಳಗೆ (ದಿನಾಂಕ) ಅಥವಾ ಒಂದು ವರ್ಷದೊಳಗಾಗಿ ಸಾಲ ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದಲ್ಲಿ, ಬಡ್ಡಿ ಸಹಾಯಧನಕ್ಕೆ ಸರ್ಕಾರದ ಬದ್ಧತೆ ಇರುವುದಿಲ್ಲ ಹಾಗೂ ಸರ್ಕಾರದ ಬಡ್ಡಿ ಸಹಾಯಧನ ಸೌಲಭ್ಯ ಅನ್ವಯಿಸುವುದಿಲ್ಲ ಹಾಗೂ ಅಂತಹ ಸಾಲಗಳಿಗೆ ಸಾಮಾನ್ಯ ಬಡ್ಡಿ ಅನ್ವಯಿಸುತ್ತದೆ.
11. ಯೋಜನೆಯ ಅವಧಿಯಲ್ಲಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರು ಪಾವತಿಯಾಗುವ ಸಾಲಗಳಿಗೆ ಮಾತ್ರ ದೊರೆಯುತ್ತದೆ. ಈ ಸೌಲಭ್ಯವು ಸಾಲ ಮರುಪಾವತಿಯ ಗಡುವಿನ ದಿನಾಂಕದವರೆಗೆ ಅಥವಾ ಪೂರ್ಣವಾಗಿ ಸಾಲ ಮರುಪಾವತಿಯಾದ ದಿನಾಂಕ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ಅನ್ವಯಿಸುತ್ತದೆ.
12. ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು) ಬಡ್ಡಿ ಸಹಾಯಧನವನ್ನು ಪಶು ಆಹಾರ/ಇತರೆ ನಿರ್ವಹಣೆ ವೆಚ್ಚದ ಸಾಲಗಳ ವಸೂಲಾತಿ ಪ್ರಮಾಣವನ್ನು ಆಧರಿಸಿ, ತ್ರೈಮಾಸಿಕ ಕ್ಲೇಮು ಬಿಲ್ಲುಗಳನ್ನು ಸಿದ್ಧಪಡಿಸಿ ಸಹಕಾರ ಸಂಘಗಳ ನಿಬಂಧಕರ ಮಂಜೂರಾತಿಗಾಗಿ ಬೇಡಿಕೆ ಸಲ್ಲಿಸತಕ್ಕದ್ದು.
13. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಸದರಿ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಕ್ಲೇಮು ಬಿಲ್ಲುಗಳನ್ನು ತಯಾರಿಸಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಿಗೆ ಸಲ್ಲಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕರು ಜಂಟಿಯಾಗಿ ಈ ಬಿಲ್ಲುಗಳನ್ನು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ ಉಪ ನಿರ್ದೇಶಕರು ಮತ್ತು ಸಹಕಾರ ಸಂಘಗಳ ಉಪ ನಿಬಂಧಕರುಗಳು ಒಂದು ಕಾಲಮಿತಿಯೊಳಗೆ ತುರ್ತಾಗಿ ಪರಿಶೀಲಿಸಿ, ಪ್ರಮಾಣೀಕರಿಸಿ ದೃಢೀಕರಿಸಿದ ನಂತರ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಿಗೆ ಸಲ್ಲಿಸತಕ್ಕದ್ದು. ಸದರಿಯವರು ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು.
14. ಒಂದು ವೇಳೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸಂಪನ್ಮೂಲಗಳನ್ನು ಪಶು ಆಹಾರ/ಇತರೆ ನಿರ್ವಹಣೆ ವೆಚ್ಚದ ಉದ್ದೇಶಕ್ಕಾಗಿ ಅಲ್ಪಾವಧಿ ಸಾಲಗಳಲ್ಲಿ ತೊಡಗಿಸಿದಾಗ ಅಂತಹ ಸಾಲಗಳ ಪ್ರಮಾಣಕ್ಕನುಗುಣವಾಗಿ ರಾಜ್ಯ ಸರ್ಕಾರಗಳಿಂದ ದೊರೆಯುವ ಬಡ್ಡಿ ಸಹಾಯಧನವನ್ನು ಡಿಸಿಸಿ ಬ್ಯಾಂಕುಗಳು ಸರ್ಕಾರವು ಗೊತ್ತುಪಡಿಸಿದ ಶೇಕಡ ಪ್ರಮಾಣಕ್ಕನುಗುಣವಾಗಿ ಆಯಾ ಪ್ರಾಥಮಿಕ ಕೃಷಿ ಪತ್ತಿನ / ಸಹಕಾರ ಸಂಘಗಳಿಗೆ ವರ್ಗಾಯಿಸತಕ್ಕದ್ದು.
15. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ಸಹಕಾರ ಸಂಘಗಳು ವಾಣಿಜ್ಯ ಬ್ಯಾಂಕುಗಳಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಸಂಬಂಧಪಟ್ಟ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕ್ಲೇಮು ಬಿಲ್ಲುಗಳನ್ನು ತಯಾರಿಸಿ, ಜಿಲ್ಲೆಗೆ ಸಂಬಂಧಪಟ್ಟ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ ಉಪ ನಿರ್ದೇಶಕರು ಮತ್ತು ಸಹಕಾರ ಸಂಘಗಳ ಉಪ ನಿಬಂಧಕರು ಜಂಟಿಯಾಗಿ ಒಂದು ಕಾಲಮಿತಿಯೊಳಗೆ ತುರ್ತಾಗಿ ಪರಿಶೀಲಿಸಿ, ದೃಢೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು.
16. ಪಿಕಾರ್ಡ್ ಬ್ಯಾಂಕುಗಳಿಗೆ ಸಂಬಂಧಿಸಿದ ಕ್ಲೇಮು ಬಿಲ್ಲುಗಳನ್ನು ಕಸ್ಕಾರ್ಡ್ ಬ್ಯಾಂಕಿನ ಜಿಲ್ಲಾ ವ್ಯವಸ್ಥಾಪಕರು ತಯಾರಿಸಿ, ಪಶುಸಂಗೋಪನೆ ಉಪನಿರ್ದೇಶಕರು ಜಂಟಿಯಾಗಿ ಒಂದು ಕಾಲಮಿತಿಯೊಳಗೆ ತುರ್ತಾಗಿ ಪರಿಶೀಲಿಸಿ, ದೃಢೀಕರಿಸಿ ಕಸ್ಕಾರ್ಡ್ ಬ್ಯಾಂಕಿನ ನಿಯಮ 441 ರಡಿ ನೇಮಕವಾದ ಲೆಕ್ಕಪರಿಶೋಧನಾ ಉಪ/ಜಂಟಿ ನಿರ್ದೇಶಕರು ಪ್ರಮಾಣೀಕರಿಸಿದ ನಂತರ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು.
17. ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಗತ್ಯವಾದ ಮಾರ್ಗದರ್ಶನ ಮತ್ತು ಸೂಚನೆಗಳನ್ನು ನೀಡಲು ಸಕ್ಷಮರಾಗಿರತಕ್ಕದ್ದು.
18. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡುವ ಸೂಚನೆಗಳನ್ನು ಸಹಕಾರ ಸಂಘಗಳು ಪಾಲಿಸತಕ್ಕದ್ದು.
19. ಸಹಕಾರ ಸಂಘಗಳ ನಿಬಂಧಕರು ಸಂಬಂಧಪಟ್ಟ ಪುನರ್ಭರಣ ಬಿಲ್ಲುಗಳು ಪರಶೀಲನೆ ಆದ ನಂತರ ದೃಢೀಕೃತ ಬಿಲ್ಲುಗಳ ಆಧಾರದ ಮೇಲೆ ಸಂಬಂಧಪಟ್ಟ ಸಂಸ್ಥೆಗಳಿಗೆ ಹಣವನ್ನು ಬಿಡುಗಡೆ ಮಾಡತಕ್ಕದ್ದು ಹಾಗೂ ಹಣದ ಉಪಯೋಗದ ಬಗ್ಗೆ ಪ್ರಗತಿ ವರದಿಗಳನ್ನು ಸಲ್ಲಿಸತಕ್ಕದ್ದು ಮತ್ತು ನಿಗದಿತ ನಮೂನೆಯಲ್ಲಿ ಉಪಯೋಗ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

ಎಂ. ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

PR. 597
SC. 50

INFORMATION TECHNOLOGY, BIOTECHNOLOGY AND SCIENCE & TECHNOLOGY SECRETARIAT

Sub: Constitution of Technical Committee for implementation of Karnataka-Geographic Information System (K-GIS) - reg.

Read: Government Order No. ITD 14 ADM 2015, dtd: 02.06.2015.

Preamble:

In Government Order read at (1) above, sanction has been for implementation of Karnataka-Geographic Information System (K-GIS) by the Karnataka State Remote Sensing Applications Centre (KSRSAC). To guide, to define procedures, suggest detailed action plan under K-GIS to facilitate framing of entire project, it is decided to constitute K-GIS technical committee under the Chairmanship of GIS expert with different department officers and representatives from Central Govt. Departments.

2) Hence the following order.

Government Order No. ITD 304 ADM 2015 (2), Date: 08.10.2015

In the circumstances explained in the preamble, to implement K-GIS, a K-GIS technical committee under the Chairmanship of Dr. Mukund Rao. with following members is constituted.

1.	Dr. Mukund Kadursrinivas Rao, Member Secretary, Karnataka Jnana Ayoga, GoK,	Chairman
2.	Chief Executive Officer, Dept of Personnel and Administrative Reforms (e-Governance) GoK,	Member
3.	Sri. T.P. Singh, Director General, Bhaskaracharya Institute for Space Applications and Geo-informatics, Gujarat	Member
4	Dr. Bhoop Singh Natural Resources Data Management System, Dept, of Science and Technology, GoI	Member
5	Executive Secretary, Karnataka State Council for Science and Technology	Member
6	Sri. A. Venkateshan, State Informatics Officer and Deputy Director General, National Informatics Centre	Member
7	Director, Karnataka State Remote Sensing Applications Centre and Mission Director, K-GIS	Member Secretary

2) The K-GIS Technical Committee will guide to define procedures, suggest detailed action plan under K-GIS to facilitate framing of entire project and shall submit recommendations regarding technical issues with suggestions to KSRSAC.

3) The Technical Committee shall discuss with various departments of Government and examine their requirements and make suitable recommendations. The executive committee is vested with all powers including financial approvals and will guide the KSRSAC or K-GIS. The Technical Committee is empowered to constitute sub-committees to formulate plan for action related to the project.

By order and in the name of the Governor of Karnataka
Shidramappa H Talawar
Under Secretary to Govt,
Dept. of Information Technology,
Biotechnology and Science & Technology

PR. 636

ಸಹಕಾರ ಸಚಿವಾಲಯ

ವಿಷಯ: 2015–16ನೇ ಸಾಲಿಗೆ ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಗೆ ಆಹಾರ ಧಾನ್ಯಗಳ ಶುದ್ಧೀಕರಣ ಮತ್ತು ವರ್ಗೀಕರಣಕ್ಕಾಗಿ (Cleaning & Grading) ಯಂತ್ರೋಪಕರಣ ಪೂರೈಕೆ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ.

ಓದಲಾಗಿದೆ:
1. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಆರ್‌ಸಿಎಸ್/ಸಿಆರ್‌ಡಿ/ಕೆಎಂಸಿ/8/2015–16, ದಿನಾಂಕ:10.04.2015.
2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಆರ್‌ಸಿಎಸ್/ಸಿಆರ್‌ಡಿ/ಕೆಎಂಸಿಇ/8/2015–16, ದಿನಾಂಕ: 28.04.2015.

ಪ್ರಸ್ತಾವನೆ:

ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಶುದ್ಧೀಕರಣ ಮತ್ತು ವರ್ಗೀಕರಣ (Cleaning & Grading) ಯಂತ್ರೋಪಕರಣಗಳನ್ನು ಖರೀದಿಸಲು ಹಾಗೂ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲು 2015–16ನೇ ಸಾಲಿನಲ್ಲಿ ರೂ.300.00 ಲಕ್ಷಗಳನ್ನು ಒದಗಿಸಲಾಗುವುದೆಂದು ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿರುತ್ತದೆ.

ಮೇಲೆ (1) ಮತ್ತು (2) ರಲ್ಲಿ ಓದಲಾದ ಸಹಕಾರ ಸಂಘಗಳ ನಿಬಂಧಕರ ಪತ್ರಗಳಲ್ಲಿ 2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಶುದ್ಧೀಕರಣ ಮತ್ತು ವರ್ಗೀಕರಣ (Cleaning & Grading) ಯಂತ್ರೋಪಕರಣಗಳನ್ನು ಖರೀದಿಸಲು ಹಾಗೂ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲು 2015–16ನೇ ಸಾಲಿನಲ್ಲಿ ರೂ.300.00 ಲಕ್ಷಗಳನ್ನು ಒದಗಿಸಿರುವುದರಿಂದ ಯೋಜನೆ ಅನುಷ್ಠಾನಕ್ಕಾಗಿ ಮಾನದಂಡಗಳನ್ನು ತಯಾರಿಸಿ ಆಡಳಿತಾತ್ಮಕ ಆದೇಶ ಹೊರಡಿಸಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಿಒ 145 ಸಿಎಲ್‌ಎಸ್ 2015, ಬೆಂಗಳೂರು, ದಿನಾಂಕ:08.10.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಶುದ್ಧೀಕರಣ ಮತ್ತು ವರ್ಗೀಕರಣ (Cleaning & Grading) ಯಂತ್ರೋಪಕರಣಗಳನ್ನು ಖರೀದಿಸಲು ಹಾಗೂ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲು ಆಯವ್ಯಯ "ಲೆಕ್ಕ ಶೀರ್ಷಿಕೆ 2425–00–001–0–01" ರಲ್ಲಿ ಒದಗಿಸಲಾಗಿರುವ ರೂ.300.00 ಲಕ್ಷಗಳಲ್ಲಿ ಯೋಜನೆಯನ್ನು ಈ ಆದೇಶಕ್ಕೆ ಲಗತ್ತಿಸಿರುವ ಷರತ್ತು/ಮಾನದಂಡಗಳನ್ವಯ ಸಹಕಾರ ಸಂಘಗಳ ನಿಬಂಧಕರು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ: ಪಿಡಿ 30 ಎಫ್‌ಆರ್‌ಓ 2015, ದಿನಾಂಕ: 26.09.2015 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 178 ವೆಚ್ಚ 2/2015, ದಿನಾಂಕ: 20.06.2015 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

ಅನುಬಂಧ

(ಸರ್ಕಾರದ ಆದೇಶ ಸಂಖ್ಯೆ: ಸಿಒ 145 ಸಿಎಲ್‌ಎಸ್ 2015, ದಿನಾಂಕ: .09.2015)

2015–16ನೇ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಗೆ ಆಹಾರ ಧಾನ್ಯಗಳನ್ನು ಶುದ್ಧೀಕರಣ ಮತ್ತು ವರ್ಗೀಕರಣ ಯಂತ್ರೋಪಕರಣಗಳನ್ನು ಪೂರೈಸುವ ಸಂಬಂಧ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ರೂ. 3.00 ಕೋಟಿಗಳನ್ನು ನಿಗದಿಪಡಿಸಿದೆ.

ಈ ಯೋಜನೆಯಡಿ ಇಲಾಖೆಗೆ ಒದಗಿಸಲಾಗಿರುವ ಅನುದಾನದಲ್ಲಿ ಆಯ್ದ ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಗೆ ಯಂತ್ರೋಪಕರಣಗಳನ್ನು ಖರೀದಿ ಮಾಡಲು ಆಯವ್ಯಯ ನೀಡಲಾಗುವುದು.

ರೈತರು ಬೆಳೆದ ಉತ್ಪನ್ನಗಳಿಗೆ ಸೂಕ್ತ ಬೆಲೆಯನ್ನು ಒದಗಿಸುವ ಸಲುವಾಗಿ ಗ್ರಾಮೀಣ ಮಟ್ಟದಲ್ಲಿ ರೈತರ ಜಮೀನಿನ ಸಮೀಪದಲ್ಲೇ ರೈತರ ಉತ್ಪನ್ನಗಳನ್ನು ಶುದ್ಧೀಕರಣ ಮತ್ತು ವರ್ಗೀಕರಣ ಮಾಡುವ ಸಲುವಾಗಿ ಕ್ಲೀನಿಂಗ್ ಮತ್ತು ಗ್ರೇಡಿಂಗ್ ಯಂತ್ರೋಪಕರಣಗಳನ್ನು ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ಸಹಕಾರ ಸಂಘಗಳಿಗೆ ಅಂದರೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕಾಫಿ ಏಲಕ್ಕಿ, ಅಡಿಕೆ ಬೆಳೆಗಾರರ ಸಹಕಾರ ಸಂಘಗಳು, ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳು, ತಮ್ಮ ರೈತ ಸದಸ್ಯರು ಬೆಳೆಯುವ ಉತ್ಪನ್ನಗಳಾದ ಭತ್ತ, ರಾಗಿ ಜೋಳ, ಮೆಕ್ಕೆಜೋಳ, ಎಣ್ಣೆ ಕಾಳುಗಳು, ಕಾಫಿ, ಏಲಕ್ಕಿ, ಅಡಿಕೆ ಹಾಗೂ ಇತ್ಯಾದಿ ಕೃಷಿ ಉತ್ಪನ್ನಗಳ ಶುದ್ಧೀಕರಣ ಮತ್ತು ವರ್ಗೀಕರಣಕ್ಕಾಗಿ ಸಣ್ಣ ಪ್ರಮಾಣದ ಯಂತ್ರೋಪಕರಣಗಳನ್ನು ಖರೀದಿಸಲು ಯಂತ್ರೋಪಕರಣಗಳ ಬೆಲೆ ಮತ್ತು ಅವುಗಳ ಅಳವಡಿಕೆಗೆ ಸೇರಿದಂತೆ ಒಟ್ಟು ವೆಚ್ಚದ ಶೇ.50ರಷ್ಟು ಅನುದಾನವನ್ನು ಒದಗಿಸುವುದು.

ಸಹಕಾರ ಸಂಘಗಳು ಈ ಯೋಜನೆಯಲ್ಲಿ ಪಡೆದ ಯಂತ್ರೋಪಕರಣಗಳನ್ನು ಸದಸ್ಯರಿಗೆ ಕಡಿಮೆ ಬಾಡಿಗೆ ದರದಲ್ಲಿ ಈ ಯಂತ್ರಗಳ ಸವಲತ್ತುಗಳನ್ನು ಒದಗಿಸುವುದು. ಈ ಯಂತ್ರೋಪಕರಣ ಬಾಡಿಗೆ ದರವನ್ನು ಜಿಲ್ಲಾ ಮಟ್ಟದಲ್ಲಿ ನಿರ್ಧರಿಸಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಅದರಲ್ಲಿ ಅನುಮೋದನೆ ಪಡೆದ ದರದಲ್ಲಿಯೂ ನಿರ್ಧರಿಸಲು ಕೆಳಕಂಡ ಸಮಿತಿ ಸದಸ್ಯರನ್ನು ಒಳಗೊಂಡಿರತಕ್ಕದ್ದು.

1. ಜಂಟಿ ನಿರ್ದೇಶಕರು, ಕೃಷಿ ಇಲಾಖೆ,
2. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು
3. ತಾಲ್ಲೂಕಿನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳು

ಮೇಲಿನ ಸಮಿತಿಯು ನಿರ್ಧರಿಸಿದ ದರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರು ಬೆಳೆಯುವ ಉತ್ಪನ್ನಗಳಿಗೆ ಉಚಿತವಾಗಿ ಹಾಗೂ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ.50ರಷ್ಟು ರಿಯಾಯಿತಿಯನ್ನು ನೀಡಬಹುದಾಗಿದೆ.

ಸಂಘಗಳ ಆಯ್ಕೆಯ ವಿಧಾನ:–

1. ಆಯ್ಕೆ ಮಾಡುವ ಪ್ರಾಥಮಿಕ ಸಂಘವು ಪರಿಣಾಮಕಾರಿಯಾಗಿ ತನ್ನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದು, ಚಾಲ್ತಿ ಸಬಲತೆ (Current viability) ಹೊಂದಿ ಲಾಭದಲ್ಲಿರಬೇಕು.
2. ಪ್ರಾಥಮಿಕ ಸಂಘವನ್ನು ಸಂಘದ ಯಶಸ್ವಿ ನಿರ್ವಹಣೆಯ ಆದ್ಯತಾ ಮೇರೆಗೆ ಆಯ್ಕೆ ಮಾಡಬೇಕಾಗುತ್ತದೆ.
3. ಫಲಾನುಭವಿ ಪ್ರಾಥಮಿಕ ಸಂಘವನ್ನು ಜಿಲ್ಲಾ ಉಪ ನಿಬಂಧಕರು ಜಿಲ್ಲಾ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡಬೇಕು.

ಸಂಘಗಳು ಯಂತ್ರೋಪಕರಣಗಳನ್ನು ಅಳವಡಿಸಲು ಸ್ಥಳಾವಕಾಶ ಹಾಗೂ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು. ಪ್ರಾಥಮಿಕ ಸಂಘಗಳೂ ತಮ್ಮ ನಿರ್ವಹಣೆ ವೆಚ್ಚ ಹಾಗೂ ಸಿಬ್ಬಂದಿ ವೆಚ್ಚವನ್ನು ಬಾಡಿಗೆ ಆದಾಯದಲ್ಲಿ ಭರಿಸಿಕೊಳ್ಳತಕ್ಕದ್ದು.

ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ರೈತರು ಬೆಳೆದ ದವಸಧಾನ್ಯಗಳನ್ನು/ಕೃಷಿ ಉತ್ಪನ್ನಗಳನ್ನು ಶುದ್ಧೀಕರಣ ಮತ್ತು ವರ್ಗೀಕರಣ ಮಾಡಲು ಈ ಯೋಜನೆಯ ಮೂಲಕ ರೈತರಿಗೆ ಸೇವಾ ಮನೋಭಾವದಿಂದ ಬಾಡಿಗೆ ನೀಡುವುದು ಮತ್ತು ಇದರಿಂದ ಬರುವ ಬಾಡಿಗೆಯನ್ನು ಈ ಯಂತ್ರೋಪಕರಣಗಳ ಹಾಗೂ ಸಿಬ್ಬಂದಿಗಳ ನಿರ್ವಹಣೆಗೆ ವೆಚ್ಚ ಮಾಡತಕ್ಕದ್ದು.

ಮೇಲೆ ತಿಳಿಸಿದ ರೈತರು ಬೆಳೆದ ಕೃಷಿ ಉತ್ಪನ್ನಗಳ ಶುದ್ಧೀಕರಣ ಮತ್ತು ವರ್ಗೀಕರಣ ಯಂತ್ರೋಪಕರಣಗಳನ್ನು ಖರೀದಿಸಿ ನೀಡುವ ಯೋಜನೆ ಇದಾಗಿದ್ದು ಈ ಯಂತ್ರಗಳನ್ನು ರಾಜ್ಯ ಮಟ್ಟದಲ್ಲಿ ಸಹಕಾರ ಸಂಘಗಳ ನಿಬಂಧಕರು, ಕೃಷಿ ನಿರ್ದೇಶಕರನ್ನೊಳಗೊಂಡ ಖರೀದಿ ಸಮಿತಿ ರಚಿಸಿ ಆ ಸಮಿತಿಯು ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳಲ್ಲಿ ಅಗತ್ಯವಿರುವ ಈ ಯೋಜನೆಯಲ್ಲಿ ತಿಳಿಸಿರುವ ಯಂತ್ರೋಪಕರಣಗಳ ಖರೀದಿಯನ್ನು ನಿರ್ಧರಿಸತಕ್ಕದ್ದು.

ಯಂತ್ರಗಳ ಖರೀದಿಗೆ ಶೇ.50 ರಷ್ಟು ಸಹಾಯಧನ ಮತ್ತು ಸಂಘವು ಶೇ.50 ರಷ್ಟು ಮೊತ್ತವನ್ನು ತೊಡಗಿಸತಕ್ಕದ್ದು. ಪ್ರತಿ ಘಟಕಕ್ಕೆ ಗರಿಷ್ಠ ರೂ. 3.00 ಲಕ್ಷಗಳ ಮಿತಿಯೊಳಗೆ ಸಹಾಯಧನ ಲಭ್ಯತೆ ನಿಗದಿಪಡಿಸಬಹುದಾಗಿದೆ.

ಈ ಯೋಜನೆ ಸೂಕ್ತ ಅನುಷ್ಠಾನಕ್ಕಾಗಿ ಅಗತ್ಯ ಸಲಹೆ/ಸೂಚನೆಗಳನ್ನು ಸಹಕಾರ ಸಂಘಗಳ ನಿಬಂಧಕರು ನೀಡತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಸದರಿ ಯೋಜನೆಯನ್ನು 2015–16ನೇ ಸಾಲಿನ ಆಯವ್ಯಯದ ಮಿತಿಯೊಳಗೊಳಪಡಿಸಿ ಜಾರಿಗೊಳಿಸತಕ್ಕದ್ದು.

ಎಂ. ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

PR. 639
SC. 50

INFORMATION TECHNOLOGY BIOTECHNOLOGY AND SCIENCE AND TECHNOLOGY SECRETARIAT

Sub: Constitution of Empowered Committee for implementation of Karnataka-Geographic Information System (K-GIS) - reg.

Read: Government Order No. ITD 14 ADM 2015, dtd: 02.06.2015.

Preamble:

In Government Order read at (1) above, sanction has been accorded for implementation of Karnataka-Geographic Information System (K-GIS) by the Karnataka State Remote Sensing Applications Centre (KSRSAC). The K-GIS will be implemented in association with Karnataka State Council for Science and Technology (KSCST) and Karnataka State Natural Disaster Management Centre (KSNMDC) and made operational within a period of 3 years. The K-GIS project envisages a standardized and current state-wide GIS asset based on fusion of different Images, maps, ground data and also a variety of departmental records/data that are available with different Government Departments and also for developing and making available different decision support GIS applications that are required by various departments. The K-GIS data and application services would be ultimately made available through a robust and easy-to use K-GIS portal hosted on a dedicated and high-performance infrastructure. High level capacity building and training activities will also be organized to enable various departments across the State to use and benefit from K-GIS.

2) The K-GIS Mission requires a constant interactive process by departments for newer GIS applications required for decision support and for defining /specifying GIS application needs and also for ensuring that K-GIS is effectively utilized.

3) To effect such a constant co-ordination and integration among departments with K-GIS Mission, it is decided to constitute an Empowered Committee under the Chairmanship of Chief Secretary, GoK and senior officers of different Govt, departments to enable quick and speedy implementation of K-GIS.

4) The proposal has been examined and hence the following order.

Government Order No. ITD 304 ADM 2015 (I), Dated: 08.10.2015.

In view of the facts explained in the preamble, an Empowered Committee under the Chairmanship of Chief Secretary, GoK with the following members has been constituted to lay down the policy guidelines and to suggest the activities for implemention of K-GIS.

1	Chief Secretary, Govt, of Karnataka	Chairman
2	Additional Chief Secretary, Govt. of Karnataka	Member
3	Additional Chief Secretary & Development Commissioner, Govt. of Karnataka	Member
4	Principal Secretary, Dept. of IT, BT and S& T, Gok and Chairman, KSRSAC	Member
5	Principal Secretary, Finance Department, Govt. of Karnataka	Member
6	Principal Secretary, Department of Rural Development and Panchayat Raj, Govt. of Karnataka	Member
7	Principal Secretary, Dept. of Planning, Programme Monitoring & Statistics, Govt. of Karnataka	Member
8	Principal Secretary, Revenue Department, Govt. of Karnataka	Member
9	Secretary, Urban Development Department, Govt. of Karnataka	Member
10	Secretary, Dept of Personnel and Administrative Reforms (e-Governance), Govt. of Karnataka	Member
11	Dr. Mukund Kadursrinivas Rao, Chairman, K-GIS Technical Committee	Member
12	Director, KSRSAC and Mission Director-KGIS	Member Secretary

* The committee may Co-opt two experts.

2) The Empowered Committee will provide overall policy guidance and support to the Programmes and ensure smooth co-ordination among various departments with K-GIS implementing authority.

3) Providing infrastructure, hardware, software, technical manpower required for implementation of the project will be the responsibility of the KSRSAC. The IT, BT and S&T Department and the KSRSAC (Nodal Agency) shall take action for early commencement and to complete the project within the period of 3 years.

By order and in the name of the Governor of Karnataka
Shidramappa H Talawar
Under Secretary to Govt,
Dept. of Information Technology,
Biotechnology and Science & Technology

PR. 637

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59